## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 746 |
| ಸದಸ್ಯರ ಹೆಸರು | : ಶ್ರೀ ಯು.ಬಿ.ವೆಂಕಟೇಶ್ |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 25-09-2020 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ನಿಲ್ದಾಣಗಳಲ್ಲಿ ಮಳಿಗೆಗಳನ್ನು ಹೊಂದಿದ್ದವರು ಲಾಕ್‌ಡೌನ್ ಅವಧಿಯಲ್ಲಿ ವ್ಯಾಪಾರವಿಲ್ಲದೆ ನಷ್ಟ ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ. | ಬಂದಿದ್ದಲ್ಲಿ, ಈ ಲಾಕ್‌ಡೌನ್ ಅವಧಿಯ ಬಾಡಿಗೆಯನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರ ನಿರ್ಣಯ ಕೈಗೊಂಡಿದೆಯೇ; | ಲಾಕ್‌ಡೌನ್ ಅವಧಿಯ ಪರವಾನಗಿ ಶುಲ್ಕವನ್ನು ಮನ್ನಾ ಮಾಡಲು ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ. |
| ಇ. | ಕೈಗೊಂಡಿದ್ದಲ್ಲಿ, ಎಷ್ಟು ತಿಂಗಳ ಅವಧಿಗೆ ಬಾಡಿಗೆ ಮನ್ನಾ ಮಾಡಲು ಉದ್ದೇಶಿಸಿದೆ? | ಕೋವಿಡ್-19ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಕ.ರಾ.ರ.ಸಾ.ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ (ಎಟಿಎಂ ಕೌಂಟರ್ ಮತ್ತು ಮೊಬೈಲ್ ಟವರ್ ಪರವಾನಗಿದಾರರನ್ನು ಹೊರತುಪಡಿಸಿ) ಎಲ್ಲಾ ಮಳಿಗೆಗಳ ಪರವಾನಗಿದಾರರಿಗೆ ಪರವಾನಗಿ ಶುಲ್ಕ ಮನ್ನಾ ಮಾಡಲು ಈಗಾಗಲೇ ಕೆಳಕಂಡಂತೆ ಕ್ರಮ ವಹಿಸಲಾಗಿದೆ:<br>• ದಿನಾಂಕ 22.03.2020 ರಿಂದ 31.03.2020 ರವರೆಗೆ ಪರವಾನಗಿ ಶುಲ್ಕವನ್ನು ಪೂರ್ಣವಾಗಿ ಮನ್ನಾ ಮಾಡಲಾಗಿದೆ.<br>• ಏಪ್ರಿಲ್-2020 ಮತ್ತು ಮೇ-2020 ಈ ಎರಡೂ ಮಾಹೆಗಳಲ್ಲಿ ಪರವಾನಗಿ ಶುಲ್ಕವನ್ನು ಪೂರ್ಣವಾಗಿ ಮನ್ನಾ ಮಾಡಲಾಗಿದೆ.<br>• ಜೂನ್-2020ರ ಮಾಹೆಯಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕದಲ್ಲಿ ಶೇಕಡ 90% ರಷ್ಟು ಮನ್ನಾ ಮಾಡಲಾಗಿದೆ.<br>• ಜುಲೈ-2020ರ ಮಾಹೆಯಲ್ಲಿ ಪೂರ್ಣ ಪರವಾನಗಿ ಶುಲ್ಕವನ್ನು ಮನ್ನಾ ಮಾಡಲಾಗಿದೆ.<br>• ಆಗಸ್ಟ್-2020ರ ಮಾಹೆಯಲ್ಲಿ ಮಳಿಗೆಗಳಿಗೆ ನಿಗದಿತ ಮಾಸಿಕ ಪರವಾನಗಿ ಶುಲ್ಕದಲ್ಲಿ ಶೇಕಡ 85% ರಷ್ಟು, ಹಾಗೂ ಹೋಟೆಲ್ / ಫಲಹಾರ ಮಂದಿರಗಳಿಗೆ ಪರವಾನಗಿ ಶುಲ್ಕದಲ್ಲಿ ಶೇ.90 ರಷ್ಟು ಮನ್ನಾ ಮಾಡಲಾಗಿದೆ.<br>• ಸೆಪ್ಟಂಬರ್-20ರ ಮಾಹೆಯಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕದಲ್ಲಿ ಶೇಕಡ 50% ರಷ್ಟು ಪರವಾನಗಿ ಶುಲ್ಕವನ್ನು ಮನ್ನಾ ಮಾಡಲು ಕ್ರಮ ವಹಿಸಲಾಗಿದೆ. |

ಸಂಖ್ಯೆ: ಟಿಡಿ 162 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು